# <u>ಕ್ಯಾಶ್‌ಬ್ಯಾಕ್ ನಿಬಂಧನೆಗಳು & ಶರತ್ತುಗಳು- ಏರ್‌ಟೆಲ್ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್</u>

**ನಿರೂಪಣೆಗಳು:** ಏರ್‌ಟೆಲ್ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ಗೆ, ಈ ಕೆಳಗಿನ ನಿಬಂಧನೆಗಳು ಸಂದರ್ಭವು ಒಪ್ಪಿಕೊಳ್ಳದ ಹೊರತಾಗಿ, ಈ ಕೆಳಗಿನ ಅರ್ಥಗಳನ್ನು ಹೊಂದಿರುತ್ತವೆ:

- **ಕ್ಯಾಶ್‌ಬ್ಯಾಕ್** ಅಂದರೆ ಕ್ಯಾಶ್‌ಬ್ಯಾಂಕ್ ಯೋಜನೆಯಡಿಯಲ್ಲಿ ಗ್ರಾಹಕರ ಕ್ರೆಡಿಟ್ ಕಾರ್ಡ್ ಖಾತೆಯಲ್ಲಿ ನೀಡಲಾದ ಹಣ ಎಂದರ್ಥ.
- **ಆಯ್ದ ವ್ಯಾಪಾರಿಗಳು** ಕೆಲವು ವ್ಯಾಪಾರಿಗಳನ್ನು ಒಳಗೊಂಡಿದ್ದು ಅವರ ಕ್ಯಾಶ್‌ಬ್ಯಾಕ್ ಗಳಿಕೆಯು 10%. ಈ ವ್ಯಾಪಾರಿಗಳು ಬ್ಯಾಂಕ್‌ನ ವಿವೇಚನೆಯಲ್ಲಿ ಬದಲಾಗಬಹುದು.
- ಕ್ಯಾಶ್‌ಬ್ಯಾಕ್ ಅನ್ನು ಈ ಕೆಳಗಿನ ಕೋಷ್ಟಕದ ಅನುಸಾರ ಪ್ರಕ್ರಿಯೆಗೊಳಿಸಲಾಗುತ್ತದೆ:

| ವೆಚ್ಚ ಮಾಡಿರುವುದು | ಕ್ಯಾಶ್‌ಬ್ಯಾಕ್ |
|---|---|
| ಏರ್‌ಟೆಲ್ ಥ್ಯಾಂಕ್ಸ್ ಆಪ್ ಮೂಲಕ ಏರ್‌ಟೆಲ್ ಮೊಬೈಲ್, ಬ್ರಾಡ್‌ಬ್ಯಾಂಡ್, ವೈಫೈ ಮತ್ತು ಡಿಟಿಎಚ್ ಬಿಲ್ ಪಾವತಿಗಳು* | 25% |
| ಏರ್‌ಟೆಲ್ ಥ್ಯಾಂಕ್ಸ್ ಆಪ್ ಮೂಲಕ ಅನಿಲ, ವಿದ್ಯುತ್ ಬಿಲ್ ಮುಂತಾದ ಯುಟಿಲಿಟಿ ಬಿಲ್ ಪಾವತಿಗಳು** | 10% |
| ಆಯ್ದ ವ್ಯಾಪಾರಿಗಳು *** | 10% |
| ಎಲ್ಲಾ ಇತರ ವ್ಯಾಪಾರಿಗಳು/ಇತರ ವೆಚ್ಚಗಳು | 1% |

* ಪ್ರತೀ ತಿಂಗಳಿಗೆ ರೂ.300ನ್ನು ಒಳಗೊಂಡಿದೆ

** ಪ್ರತೀ ತಿಂಗಳಿಗೆ ರೂ.300ನ್ನು ಒಳಗೊಂಡಿದೆ.

*** ಕ್ಯಾಶ್‌ಬ್ಯಾಕ್ ಸ್ವಿಗ್ಗಿ, ಝೊಮ್ಯಾಟೋ, & ಬಿಗ್‌ಬಾಸ್ಕೆಟ್ ಮುಂತಾದ ಆಯ್ದ ವ್ಯಾಪಾರಿಗಳ ಮೇಲೆ ವೆಚ್ಚ ಮಾಡಲು ಅರ್ಹವಾಗಿರುತ್ತದೆ. ಎಲ್ಲಾ ವ್ಯಾಪಾರಿಗಳಲ್ಲಿ ತಿಂಗಳಿಗೆ ಒಟ್ಟು ರೂ.500 ಕ್ಯಾಶ್‌ಬ್ಯಾಕ್ ಒಳಗೊಂಡಿರುತ್ತದೆ. ಆಯ್ದ ವ್ಯಾಪಾರಿಗಳು ಮತ್ತು ಅವರ ಸಂಬಂಧಿಸಿದ ಕೊಡುಗೆಗಳು ಯಾವುದೇ ಪೂರ್ವ ಸೂಚನೆಯನ್ನು ನೀಡದೆ ಕಾಲಕಾಲಕ್ಕೆ ಬದಲಾವಣೆಗೆ ಒಳಪಡುತ್ತವೆ.

- ಕ್ಯಾಶ್‌ಬ್ಯಾಕ್‌ಗಳು ಈ ಕೆಳಗಿನ ವೆಚ್ಚಗಳು/ವಹಿವಾಟುಗಳಿಗೆ ಅರ್ಹವಾಗುವುದಿಲ್ಲ,
    - ಇಂಧನ ವೆಚ್ಚಗಳು
    - ಇಎಂಐ ವಹಿವಾಟುಗಳು
    - ಇಎಂಐ ಪಾವತಿಯಾಗಿ ಪರಿವರ್ತನೆಯಾದ ಖರೀದಿಗಳು
    - ವಾಲೆಟ್ ಲೋಡಿಂಗ್ ವಹಿವಾಟುಗಳು
        - ಆಭರಣ ವಸ್ತುಗಳ ಖರೀದಿ
        - ನಗದು ಮುಂಗಡಗಳು
        - ತೀರಿಕೆಯಾಗದ ಬಾಕಿಗಳ ಪಾವತಿ
        - ಕಾರ್ಡ್ ಶುಲ್ಕಗಳು ಮತ್ತು ಇತರ ಕಾರ್ಡ್ ವೆಚ್ಚಗಳ ಪಾವತಿ
    - ಬಾಡಿಗೆ ಪಾವತಿಗಳು

ಉದಾಹರಣೆಗೆ ಗ್ರಾಹಕರು ಒಂದು ವೇಳೆ ಈ ಕೆಳಗಿನ ವೆಚ್ಚಗಳ ವಿಭಾಗದೊಂದಿಗೆ ಬಿಲ್ಲಿಂಗ್ ಆವರ್ತದಲ್ಲಿ ರೂ.30,000 ವೆಚ್ಚ ಮಾಡಿದ್ದಲ್ಲಿ i) ಏರ್‌ಟೆಲ್ ಆಪ್ ಮೂಲಕ ರೀಚಾರ್ಜ್: ರೂ.2500 ii) ಏರ್‌ಟೆಲ್ ಥ್ಯಾಂಕ್ಸ್ ಆಪ್ ಮೂಲಕ ಯುಟಿಲಿಟಿ ಬಿಲ್ ಪಾವತಿ: ರೂ.2500 iii) ಸ್ವಿಗ್ಗಿ, ಝೊಮ್ಯಾಟೋ, & ಬಿಗ್‌ಬಾಸ್ಕೆಟ್:ರೂ.5000 iv) ಇತರ ವೆಚ್ಚಗಳು:ರೂ20,000

- ಇವುಗಳಲ್ಲಿ "ಇತರ ವೆಚ್ಚಗಳು", ರೂ.10,000ವು ಇಎಂಐ ಖರೀದಿಯಾಗಿದೆ
- ಆದ್ದರಿಂದ, ಕ್ಯಾಶ್‌ಬ್ಯಾಕ್‌ಗೆ ಅರ್ಹವಾಗುವ ಒಟ್ಟು ವೆಚ್ಚವು ರೂ.2500+ ರೂ.2500+ ರೂ.5,000 + {ರೂ.20000-ರೂ.10,000(ಇಎಂಐ ವಹಿವಾಟು)} ರೂ.10,000 = ರೂ.20,000 ಆಗಿದೆ

ಬಿಲ್ಲಿಂಗ್ ಆವರ್ತಕ್ಕೆ ಕ್ಯಾಶ್‌ಬ್ಯಾಕ್ ಅನ್ನು ಈ ಕೆಳಗಿನ ಉದಾಹರಣೆಯಂತೆ ಲೆಕ್ಕ ಮಾಡಲಾಗುತ್ತದೆ:

ರೂ.2500ರ25% = ರೂ.625(ಅದು ಪ್ರತಿ ತಿಂಗಳಿಗೆ ರೂ.300 ಒಳಗೊಂಡಿರುವುದರಿಂದ), ಅರ್ಹ ಕ್ಯಾಶ್‌ಬ್ಯಾಕ್ ರೂ.300 ಆಗಿದೆ)

ರೂ. 2500 ರ 5% = ರೂ.250

ರೂ. 5,000ರ 10% = ರೂ.500

ರೂ. 10,000ರ 1% = ರೂ.100

ಆದ್ದರಿಂದ , ಉದಾಹರಣೆಯ ಒಟ್ಟು ಕ್ಯಾಶ್‌ಬ್ಯಾಕ್ ರೂ. 300+250+500+100 = ರೂ. 1,150 ಆಗಿರುತ್ತದೆ

- ಕ್ಯಾಶ್‌ಬ್ಯಾಕ್‌ನ 25% ಮತ್ತು 10% ವಿಭಾಗಗಳನ್ನು ಸಂಬಂಧಪಟ್ಟ ವ್ಯಾಪಾರಿಗಳು ಹಂಚಿಕೊಂಡ ವ್ಯಾಪಾರಿ ಐಡಿ(ಎಂಐಡಿಗಳು) ಆಧಾರದಲ್ಲಿ ಲೆಕ್ಕ ಹಾಕಲಾಗುತ್ತದೆ.ಈ ವ್ಯಾಪಾರಿಗಳ ವಹಿವಾಟು ಯಾವುದೇ ಹೆಚ್ಚುವರಿ ಕ್ಯಾಶ್‌ಬ್ಯಾಕ್ ಗಳಿಸದೇ ಇದ್ದಲ್ಲಿ ಅದಕ್ಕೆ ಎಕ್ಸಿಸ್ ಬ್ಯಾಂಕ್ ಹೊಣೆಯಾಗುವುದಿಲ್ಲ.

- ವ್ಯಾಪಾರಿಗಳ ಮರುಪಾವತಿ/ಕ್ಯಾಶ್‌ಬ್ಯಾಕ್/ವೆಚ್ಚ ವಾಪಾಸಾತಿ ಮುಂತಾದ ಕ್ರೆಡಿಟ್ ಕಾರ್ಡ್ ಖಾತೆಗೆ ಬಂದ ಗ್ರಾಹಕೇತರ ಪಾವತಿ/ಕ್ರೆಡಿಟ್ ಅನ್ನು ಕಾರ್ಡ್‌ನ ಬಾಕಿ ಪಾವತಿಯಾಗಿ ಪರಿಗಣಿಸಲಾಗುವುದಿಲ್ಲ, ಆದರೂ, ಆ ಕ್ರೆಡಿಟ್ ಅನ್ನು ತರುವಾಯದ ತಿಂಗಳ ಬಾಕಿಯನ್ನು ಲೆಕ್ಕ ಹಾಕಲು ಪರಿಗಣಿಸಲಾಗುತ್ತದೆ.

- ಪ್ರಸಕ್ತ ಬಿಲ್ಲಿಂಗ್ ಆವರ್ತದ ಖರೀದಿಗೆ ಗಳಿಸಿದ ಕ್ಯಾಶ್‌ಬ್ಯಾಕ್ ಲೆಕ್ಕವಿವರಣೆ ರಚನೆಯ ದಿನಾಂಕದ 3 ದಿನಗಳ ಮೊದಲು ಮುಂದಿನ ಬಿಲ್ಲಿಂಗ್ ಆವರ್ತಕ್ಕೆ ಜಮೆಯಾಗುತ್ತದೆ ಅಂದರೆ ಲೆಕ್ಕ ವಿವರಣೆ ದಿನಾಂಕವು 12 ಮಾರ್ಚ್ ಆಗಿದ್ದಲ್ಲಿ, ಫೆಬ್ರವರಿ ತಿಂಗಳ ಆವರ್ತದಲ್ಲಿ(13 ಜನವರಿ-12 ಫೆಬ್ರವರಿ) ಗಳಿಸಿದ ಕ್ಯಾಶ್‌ಬ್ಯಾಕ್ 9 ಮಾರ್ಚ್‌ಗೆ ಜಮೆಯಾಗುತ್ತದೆ.

| ಲೆಕ್ಕ ವಿವರಣೆ ಅವಧಿ: ತಿಂಗಳ 13ನೇ ಮತ್ತು ಮುಂದಿನ ತಿಂಗಳ 12 | | | |
|---|---|---|---|
| ಕ್ಯಾಶ್‌ಬ್ಯಾಕ್ ಕ್ರೆಡಿಟ್ | 10ರಂದು ಏರ್‌ಟೆಲ್ ಥ್ಯಾಂಕ್ಸ್ ಆಪ್ ಮೂಲಕ ಯುಟಿಲಿಟಿ ಬಿಲ್ ಪಾವತಿ | ರೂ.1000 | Dr. |
| | ಜನವರಿ 12 ಲೆಕ್ಕವಿವರಣೆ ದಿನಾಂಕದೊಂದಿಗೆ ಜನವರಿ ಆವರ್ತದಲ್ಲಿ ಗಳಿಸಿದ ಕ್ಯಾಶ್‌ಬ್ಯಾಕ್ | ರೂ.100 | |

| | | | |
|---|---|---|---|
| | ಮುಂದಿನ ಲೆಕ್ಕವಿವರಣೆ ದಿನಾಂಕದ೩ ದಿನಗಳ ಮೊದಲು ಅಂದರೆ ಫೆಬ್ರವರಿ ೯ಕ್ಕೆ ಕ್ರೆಡಿಟ್ ಆದ ಕ್ಯಾಶ್‌ಬ್ಯಾಕ್ | ರೂ.100 | Cr. |

- ಗಳಿಸಿದ ಕ್ಯಾಶ್‌ಬ್ಯಾಕ್ ಅನ್ನು ಲೆಕ್ಕ ವಿವರಣೆ ಅವಧಿಯ ವೇಳೆ ಮಾಡಿದ ವೆಚ್ಚ ಕಳೆ ಅದೇ ಅವಧಿಯಲ್ಲಿನ ವಾಪಾಸಾತಿ ಅಥವಾ ರೀಫಂಡ್ ಆಧಾರದಲ್ಲಿ ಲೆಕ್ಕ ಮಾಡಲಾಗುತ್ತದೆ.

- ಒಂದು ವೇಳೆ ಲೆಕ್ಕ ವಿವರಣೆ ತಯಾರಾದ ದಿನಾಂಕದ ಬಳಿಕ ಖರೀದಿ/ವಹಿವಾಟು ವಾಪಾಸಾದಲ್ಲಿ/ ರದ್ದಾದಲ್ಲಿ/ಹಿಂಚಲನೆಯಾದಲ್ಲಿ, ಅಂತಹ ವಹಿವಾಟುಗಳ ಮೇಲಿನ ಕ್ಯಾಶ್‌ಬ್ಯಾಕ್ ಅಂತಹ ಖರೀದಿ/ವಹಿವಾಟು ಹಿಂಚಲನೆಯ ದಿನಾಂಕದಂದು ಡೆಬಿಟ್ ಆಗುತ್ತದೆ.

- ಒಂದುವೇಳೆ ನಂತರದ ದಿನಾಂಕದಲ್ಲಿ ವಹಿವಾಟು ಇಎಂಐ ಆಗಿ ಪರಿವರ್ತನೆಯಾದಲ್ಲಿ, ಅಂತಹ ವಹಿವಾಟಿನಲ್ಲಿ ಗಳಿಸಿದ ಕ್ಯಾಶ್‌ಬ್ಯಾಕ್ ಅದೇ ಬಿಲ್ಲಿಂಗ್ ಆವರ್ತದಲ್ಲಿ ಇಎಂಐ ಪರಿವರ್ತನೆಯಾಗಿ ಹಿಂಚಲನೆಯಾಗುತ್ತದೆ.

- ಬಿಲ್ಲಿಂಗ್ ಆವರ್ತದ ವೇಳೆ ಗಳಿಸಿದ/ಹಿಂಚಲನೆಯಾದ ಕ್ಯಾಶ್‌ಬ್ಯಾಕ್‌ಗಳು ತಿಂಗಳ ಕ್ರೆಡಿಟ್ ಕಾರ್ಡ್ ಬಿಲ್ಲಿಂಗ್ ವಿವರಣೆಯಲ್ಲಿಕಾಣಿಸುತ್ತವೆ.ಒಂದು ವೇಳೆ ಗ್ರಾಹಕರು ವಹಿವಾಟನ್ನು ಹಿಂಪಡೆದಲ್ಲಿ, ಸಂಬಂಧಪಟ್ಟ ವಹಿವಾಟಿನ ಮೇಲೆ ಗಳಿಸಿದ ಕ್ಯಾಶ್‌ಬ್ಯಾಕ್ ಕೂಡಾ ಹಿಂಚಲನೆಯಾಗುತ್ತದೆ ಮತ್ತು ಒಂದು ವೇಳೆ ಗ್ರಾಹಕರು ಹಿಂಚಲನೆ ಕ್ಯಾಶ್‌ಬ್ಯಾಕ್ ರೂಪದಲ್ಲಿ ಕ್ರೆಡಿಟ್ ಕಾರ್ಡ್ ಮೇಲೆ ತೀರಿಸದೇ ಇದ್ದ ಬಾಕಿ ಇದ್ದಲ್ಲಿ, ಅದನ್ನು ಸಾಮಾನ್ಯ ತೀರಿಕೆಯಾಗದ ಬಾಕಿ ಎಂದು ಪರಿಗಣಿಸಲಾಗುತ್ತದೆ ಮತ್ತು ಗ್ರಾಹಕರು ಆ ಬಾಕಿ ಮೊತ್ತವನ್ನು ಪಾವತಿಸಲು ಹೊಣೆಗಾರರಾಗಿರುತ್ತಾರೆ ಹಾಗು ಒಂದು ವೇಳೆ ಅಷ್ಟು ಮೊತ್ತವನ್ನು ಪಾವತಿಸಲು ವಿಫಲರಾದಲ್ಲಿ ಮುಖ್ಯ ನಿಬಂಧನೆಗಳು ಮತ್ತು ಶರತ್ತುಗಳಲ್ಲಿ ಸೂಚಿಸಿದಂತೆ ವೆಚ್ಚಗಳ ನಿಗದಿಯಂತೆ ಶುಲ್ಕ & ವೆಚ್ಚಗಳನ್ನು ವಿಧಿಸಲಾಗುತ್ತದೆ.

- ಕ್ಯಾಶ್‌ಬ್ಯಾಕ್ ಗಳಿಸಲು ಈ ಕೆಳಗಿನಂತೆ ಮಿತಿ ಇರುತ್ತದೆ:
  - ಏರ್‌ಟೆಲ್ ಥ್ಯಾಂಕ್ಸ್ ಆಪ್ ಮೂಲಕ ಏರ್‌ಟೆಲ್ ಮೊಬೈಲ್, ಬ್ರಾಡ್‌ಬ್ಯಾಂಡ್, ವೈಫೈ ಮತ್ತು ಡಿಟಿಎಚ್ ಬಿಲ್ ಪಾವತಿಗಳ ವೆಚ್ಚಕ್ಕೆ 25% ಕ್ಯಾಶ್‌ಬ್ಯಾಕ್ ಮತ್ತು ತಿಂಗಳಿಗೆ ರೂ.300 ಒಳಗೊಂಡಿರುತ್ತದೆ.
  - ಏರ್‌ಟೆಲ್ ಥ್ಯಾಂಕ್ಸ್ ಆಪ್ ಮೂಲಕ ಗ್ಯಾಸ್, ವಿದ್ಯುತ್ ಮುಂತಾದ ಯುಟಿಲಿಟಿ ಬಿಲ್ ಮೇಲಿನ ವೆಚ್ಚಕ್ಕೆ 10% ಕ್ಯಾಶ್‌ಬ್ಯಾಕ್, ತಿಂಗಳಿಗೆ ರೂ.300 ಒಳಗೊಂಡಿರುತ್ತದೆ.
  - ಆಯ್ದ ವ್ಯಾಪಾರಿಗಳ ಮೇಲಿನ 10% ಕ್ಯಾಶ್‌ಬ್ಯಾಕ್ ತಿಂಗಳಿಗೆ ರೂ.500 ಒಳಗೊಂಡಿರುತ್ತದೆ(ಎಲ್ಲಾ ವ್ಯಾಪಾರಿಗಳನ್ನ ಸೇರಿಸಿ)
  - ಇತರ ವೆಚ್ಚಗಳ ಮೇಲೆ 1% ಕ್ಯಾಶ್‌ಬ್ಯಾಕ್ ಮಿತಿ ಇರುವುದಿಲ್ಲ

- ಒಂದು ವೇಳೆ ಪ್ರಾಥಮಿಕ ಕಾರ್ಡ್‌ದಾರರು ಅಥವಾ ಬ್ಯಾಂಕ್‌ನಿಂದ ಯಾವುದೇ ಸಮಯದಲ್ಲಿ ಯಾವುದೇ ಕಾರಣಕ್ಕೆ ಕಾರ್ಡ್‌ದಾರರ ಏರ್‌ಟೆಲ್ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಮುಕ್ತಾಯವಾದರೆ, ಪ್ರಾಥಮಿಕ ಕಾರ್ಡ್‌ದಾರರು ತಕ್ಷಣವೇ

ಕ್ಯಾಶ್‌ಬ್ಯಾಕ್ ಗಳಿಸಲು ಅನರ್ಹರಾಗುತ್ತಾರೆ ಮತ್ತು ಏರ್‌ಟೆಲ್ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ನ ಸ್ವಯಂಪ್ರೇರಿತ ಅಥವಾ ಅನೈಚ್ಛಿಕ ರದ್ದತಿಯ ಬಳಿಕ ಎಲ್ಲಾ ಬಳಸದ ಕ್ಯಾಶ್‌ಬ್ಯಾಕ್ ತಕ್ಷಣದಲ್ಲಿ ಸ್ವಯಂಚಾಲಿತವಾಗಿ ಕಳೆದುಹೋಗುತ್ತದೆ.

- ಕಾರ್ಡ್‌ದಾರರ ಖಾತೆಗೆ ಬಾಕಿಯಿರುವ ಕ್ಯಾಶ್‌ಬ್ಯಾಕ್ ಸೇರಿದಂತೆ ಯಾವುದೇ ಉಳಿದ ಕ್ರೆಡಿಟ್‌ಗಳನ್ನು ಈ ಕೆಳಗಿನವುಗಳು ಉಂಟಾದಾಗ ಅವುಗಳ ಅರ್ಹತೆಯನ್ನು ತಕ್ಷಣವೇ ನಿಲ್ಲಿಸಲಾಗುತ್ತದೆ:

  - ಏರ್‌ಟೆಲ್ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್‌ನ ರದ್ದತಿ; ಅಥವಾ
  - ಏರ್‌ಟೆಲ್ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಇತರ ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಆಗಿ ಪರಿವರ್ತನೆಯಾದಾಗ
  - ಲೋಪದ ಸಂದರ್ಭದಲ್ಲಿ ಅಂದರೆ ಪಾವತಿ ಕೊನೆ ದಿನಾಂಕದ ಮೊದಲು ಕನಿಷ್ಠ ಬಾಕಿ ಮೊತ್ತವನ್ನು ಪಾವತಿಸದೇ ಇದ್ದ ಸಂದರ್ಭದಲ್ಲಿ ಅಥವಾ
  - ಕಾರ್ಡ್ ಸದಸ್ಯ ಒಪ್ಪಂದದಲ್ಲಿನ ಯಾವುದೇ ಷರತ್ತಿನ ಉಲ್ಲಂಘನೆ

  ಮತ್ತು ಕಾರ್ಡ್ ಸದಸ್ಯರ ಸದಸ್ಯತ್ವ ಮರುಪ್ರಾರಂಭಗೊಂಡರೂ, ಎಕ್ಸಿಸ್ ಬ್ಯಾಂಕ್ ಯಾವುದೇ ಮರುಪಾವತಿ, ವಿಸ್ತರಣೆ ಅಥವಾ ಪರಿಹಾರವನ್ನು ನೀಡುವುದಿಲ್ಲ

- ಕ್ರೆಡಿಟ್ ಕಾರ್ಡ್ ಅನ್ನು ವೈಯಕ್ತಿಕ ಖರ್ಚು ಮತ್ತು ಉದ್ದೇಶಗಳಿಗೆ ಮಾತ್ರ ನೀಡಲಾಗುತ್ತದೆ. ಕಾರ್ಡ್‌ದಾರರು ಕ್ರೆಡಿಟ್ ಕಾರ್ಡ್ ಅನ್ನು ಯಾವುದೇ ಮರುಮಾರಾಟ, ವಾಣಿಜ್ಯ ಅಥವಾ ವ್ಯವಹಾರ ಉದ್ದೇಶಗಳಿಗೆ ಬಳಸುವಂತಿಲ್ಲ. ಕ್ರೆಡಿಟ್ ಕಾರ್ಡ್ ಅನ್ನು ಕೇವಲ ನ್ಯಾಯಸಮ್ಮತ, ವಿಶ್ವಾಸಯೋಗ್ಯ ವೈಯಕ್ತಿಕ ಉದ್ದೇಶಗಳಿಗೆ ಮಾತ್ರವೇ ಬಳಸಬೇಕು ಮತ್ತು ಯಾವುದೇ ಮನಿ ಲಾಂಡರಿಂಗ್, ಸಮಾಜ-ವಿರೋಧಿ ಮತ್ತು ಅನುಮಾನಾಸ್ಪದ ಚಟುವಟಿಕೆಗಳಿಗೆ ಬಳಸಬಾರದು ಅಥವಾ ವ್ಯವಹಾರದಲ್ಲಿ ವಾಣಿಜ್ಯವಾಗಿ ಬಳಸಿಕೊಳ್ಳಬಾರದು(ಉದಾ. ಕಾರ್ಯವಾಹಿ ಬಂಡವಾಳ ಉದ್ದೇಶಗಳಿಗೆ).

- ಒಂದು ವೇಳೆ ಕ್ರೆಡಿಟ್ ಕಾರ್ಡ್ ಅನ್ನು ನಿಷೇಧಿತ, ನಿರ್ಬಂಧಿತ, ವಾಣಿಜ್ಯ ಉದ್ದೇಶಗಳಿಗೆ ಅಥವಾ ಮೇಲೆ ಸೂಚಿಸಲಾದ ಯಾವುದೇ ಉದ್ದೇಶಗಳಿಗೆ ಬಳಿಸಿರುವುದು ಕಂಡುಬಂದಲ್ಲಿ, ಎಕ್ಸಿಸ್ ಬ್ಯಾಂಕ್ ತನ್ನ ಸ್ವಂತ ವಿವೇಚನೆಯಿಂದ ಸಂಬಂಧಪಟ್ಟ ಕ್ರೆಡಿಟ್ ಕಾರ್ಡ್ ಮತ್ತು ಹೆಚ್ಚುವರಿ/ಆಡ್-ಆನ್ ಕಾರ್ಡ್‌ಗಳನ್ನು ರದ್ದುಗೊಳಿಸುವ ಹಕ್ಕನ್ನು ಚಲಾಯಿಸಬಹುದು ಮತ್ತು ಕಾರ್ಡ್‌ದಾರರಿಗೆ ಯಾವುದೇ ಸೂಚನೆಯನ್ನು ನೀಡದೆ ಗಳಿಸಲಾದ ಕ್ಯಾಶ್‌ಬ್ಯಾಕ್ ಅನ್ನು ತಡೆಹಿಡಿಯಬಹುದು/ರದ್ದುಮಾಡಬಹುದು. ಆಕ್ಸಿಕ್ ಬ್ಯಾಂಕ್ ನಿಮ್ಮನ್ನು ಫೋನ್ ಮೂಲಕ ಅಥವಾ ಯಾವುದೇ ಇತರ ಅಧಿಕೃತ ಸಂವಹನದ ಮೂಲಕ ಕ್ರೆಡಿಟ್ ಕಾರ್ಡ್ ವಹಿವಾಟುಗಳು, ಬಳಕೆಯ ಮಾದರಿ ಇತ್ಯಾದಿಗಳ ಕುರಿತ ವಿವರಗಳು, ಮಾಹಿತಿ ಮತ್ತು ಪುರಾವೆಗಳು ಮುಂತಾದವುಗಳ ಬಗ್ಗೆ ತನಿಖೆ ಮಾಡಬಹುದು. ಪ್ರತಿಕ್ರಿಯೆಯು ತೃಪ್ತಿಕರವಾಗಿದರದೇ ಇದ್ದಲ್ಲಿ ಅಥವಾ ಕಾರ್ಡ್‌ದಾರರಿಂದ ಯಾವುದೇ ಪ್ರತಿಕ್ರಿಯೆ ಬರದೇ ಇದ್ದಲ್ಲಿ, ಎಕ್ಸಿಸ್ ಬ್ಯಾಂಕ್ ಕ್ರೆಡಿಟ್ ಕಾರ್ಡ್ ಅನ್ನು ನಿರ್ಬಂಧಿಸಬಹುದು/ಮುಕ್ತಾಯಗೊಳಿಸಬಹುದು.

- ವ್ಯಾಪಾರ ಸಂಸ್ಥೆಯಲ್ಲಿ ಕಾರ್ಡ್ ಬಳಕೆಯು ಬ್ಯಾಂಕ್‌ನಿಂದ ಪ್ರತೀ ಕಾರ್ಡ್ ಖಾತೆಗೆ ನಿಗದಿಪಡಿಸಲಾದ ಕ್ರೆಡಿಟ್ ಮಿತಿಗೆ ಸೀಮಿತವಾಗಿರುತ್ತದೆ.

- ಬ್ಯಾಂಕ್ ಯಾವುದೇ ಸಮಯದಲ್ಲಿ ಪೂರ್ವಸೂಚನೆಯಿಲ್ಲದೆ,ಅಥವಾ ಯಾವುದೇ ಕಾರಣಗಳನ್ನು ನೀಡದೆ ವ್ಯಾಪಾರ

ಸಂಸ್ಥೆಯಲ್ಲಿ ಶುಲ್ಕಕ್ಕಾಗಿ ದೃಢೀಕರಣವನ್ನು ನಿರಾಕರಿಸಬಹುದು ಮತ್ತು/ಅಥವಾ ಕಾರ್ಡ್ ಬಳಸುವ ಕಾರ್ಡ್ ಸದಸ್ಯರ ಅರ್ಹತೆಯನ್ನು ನಿರ್ಬಂಧಿಸಬಹುದು ಅಥವಾ ಮುಂದೂಡಬಹುದು ಮತ್ತು /ಅಥವಾ ಕಾರ್ಡ್ ಅನ್ನು ರದ್ದುಗೊಳಿಸಬಹುದು ಅಥವಾ ಅಮಾನತುಗೊಳಿಸಬಹುದು. ಕ್ರೆಡಿಟ್ ಅಥವಾ ವ್ಯವಹಾರ ಅಪಾಯದ ಸರಿಯಾದ ನಿರ್ವಹಣೆಗೆ , ಅಥವಾ ಕಾರ್ಡ್ ಅಥವಾ ಕಾರ್ಡ್ ಖಾತೆಯು ತಪ್ಪಾಗಿ ಬಳಸಲ್ಪಡುತ್ತಿದ್ದರೆ ಅಥವಾ ತಪ್ಪಾಗಿ ಬಳಸುವ ಸಂಭಾವ್ಯತೆ ಇದ್ದಲ್ಲಿ, ಅದು ಅಗತ್ಯವೆಂದು ನಂಬಿದಲ್ಲಿ, ಬ್ಯಾಂಕ್ ಸ್ವತಃ ಕ್ರೆಡಿಟ್ ಕಾರ್ಡ್ ಅನ್ನು ಮರುಪಡೆದುಕೊಳ್ಳಬಹುದು/ತನ್ನೊಂದಿಗೆ ಇರಿಸಿಕೊಳ್ಳಬಹುದು.

- ಯೋಜನೆ ಮುಕ್ತಾಯ ದಿನಾಂಕದ ಬಳಿಕ ಕ್ಯಾಶಬ್ಯಾಕ್ ಯೋಜನೆಯನ್ನು ಮುಂದುವರಿಸಲು ಅಥವಾ ಹೊಸ ಅಥವಾ ಸಮಾನ ಯೋಜನೆಯ ಮೂಲಕ ಕ್ಯಾಶ್‌ಬ್ಯಾಕ್ ಯೋಜನೆಯನ್ನು ಬದಲಿಸಲು ಕ್ಯಾಶ್‌ಬ್ಯಾಕ್ ಪ್ರತಿಪಾದನೆಯಲ್ಲಿ ಒಳಗೊಂಡಿರುವ ಯಾವುದನ್ನು ಕೂಡಾ ಎಕ್ಸಿಸ್ ಬ್ಯಾಂಕ್ ಅಥವಾ ಯಾವುದೇ ಭಾಗವಹಿಸುವ ವ್ಯಾಪಾರ ಪಾಲುದಾರರು ಆವಶ್ಯಕ ಬಾಧ್ಯತೆಯಾಗಿ ಅರ್ಥೈಸುವುದಿಲ್ಲ.

- ಬ್ಯಾಂಕ್ ಯಾವುದೇ ಗ್ರಾಹಕರು ಕ್ಯಾಶ್‌ಬ್ಯಾಕ್ ಗಳಿಸುವುದರಿಂದ ಅಥವಾ ಈ ಪ್ರೋಗ್ರಾಂನ ಯಾವುದೇ ಲಕ್ಷಣಗಳನ್ನು ಬಳಸುವುದನ್ನು ತಾತ್ಕಾಲಿಕವಾಗಿ ನಿಷೇಧಿಸಬಹುದು.

- ತಮ್ಮ ಇಎಂಐ ವಹಿವಾಟುಗಳನ್ನು ರದ್ದುಪಡಿಸಲು ಗ್ರಾಹಕರು ಎಕ್ಸಿಸ್ ಬ್ಯಾಂಕ್ ಗ್ರಾಹಕ ಸೇವೆಗೆ 18604195555/18605005555ಈ ಸಂಖ್ಯೆಗೆ ಕರೆ ಮಾಡಬಹುದು.

- ಗ್ರಾಹಕರು/ಬ್ಯಾಂಕ್‌ನಿಂದ ರದ್ದು ಮಾಡಲ್ಪಟ್ಟ ಇಎಂಐ ವಹಿವಾಟುಗಳಿಗೆ, ಗ್ರಾಹಕರ ಲೆಕ್ಕವಿವರಣೆಯಲ್ಲಿ ಆ ಸಂಬಂಧಿಸಿದ ಆವರ್ತಕ್ಕೆ ಕ್ಯಾಶ್‌ಬ್ಯಾಕ್ ಎರಡು ಬಾರಿ ಡೆಬಿಟ್ ಆಗಬಹುದು, ಅದನ್ನು ಸರಿಪಡಿಸಲು ಗ್ರಾಹಕರು ಕ್ಯಾಶ್‌ಬ್ಯಾಕ್ ತಪ್ಪಾಗಿ ಡೆಬಿಟ್ ಆಗಿದೆ ಎಂದು ಮೊತ್ತ ಮತ್ತು ದಿನಾಂಕವನ್ನು ಸೂಚಿಸುವ ಮೂಲಕ ಎಕ್ಸಿಸ್ ಬ್ಯಾಂಕ್ ಗ್ರಾಹಕ ಸೇವೆಗೆ ಕರೆ ಮಾಡಿ ಸೇವಾ ಮನವಿಯನ್ನು ಸಲ್ಲಿಸಬಹುದು.

- ಇಎಂಐ ವಹಿವಾಟುಗಳ ಮೇಲೆ ಯಾವುದೇ ಕ್ಯಾಶ್‌ಬ್ಯಾಕ್ ಇಲ್ಲದೇ ಇರುವುದರಿಂದ, ವಹಿವಾಟು ಇಎಂಐ ಆಗಿ ಪರಿವರ್ತನೆಯಾದ ಬಳಿಕ, ಗ್ರಾಹಕರು ಇಎಂಐ ಅನ್ನು ಪೂರ್ಣಪಾವತಿ ಮಾಡಲು ಆಯ್ಕೆ ಮಾಡಿದ್ದಲ್ಲಿ ಮತ್ತು ಅದರ ಪೂರ್ಣ ಮೊತ್ತವನ್ನು ಪಾವತಿ ಮಾಡಿದ ನಂತರವೂ ಗ್ರಾಹಕರು ಯಾವುದೇ ಕ್ಯಾಶ್‌ಬ್ಯಾಕ್ ಅನ್ನು ಗಳಿಸುವುದಿಲ್ಲ.

- ತಮ್ಮ ಇಎಂಐ ವಹಿವಾಟುಗಳನ್ನು ಪೂರ್ವಮುಕ್ತಾಯ ಮಾಡಲು ಬಯಸುವ ಗ್ರಾಹಕರು ಎಕ್ಸಿಸ್ ಬ್ಯಾಂಕ್ ಗ್ರಾಹಕ ಸೇವೆಗೆ ಕರೆ ಮಾಡಬಹುದು ಮತ್ತು ಮನವಿಯನ್ನು ಸಲ್ಲಿಸಬಹುದು.

- ಪ್ರತೀ ವೈಯಕ್ತಿಕ ವಹಿವಾಟಿಗೆ ಕ್ಯಾಶ್‌ಬ್ಯಾಕ್ ಅನ್ನು ಸಮೀಪದ ರೂಪಾಯಿ ಮೌಲ್ಯಕ್ಕೆ ಪೂರ್ತಿಗೊಳಿಸಲಾಗುತ್ತದೆ. ಉದಾಹರಣೆಗೆ, ರೂ.1540ರ ವಹಿವಾಟಿಗೆ, ಗ್ರಾಹಕರು 1% ಕ್ಯಾಶ್‌ಬ್ಯಾಕ್ ಅರ್ಹತೆ ಹೊಂದಿರುತ್ತಾರೆ ಅಂದರೆ 1540*1% = ರೂ.15.4. ಆ ವೈಯಕ್ತಿಕ ವಹಿವಾಟಿಗೆ ಗ್ರಾಹಕರಿಗೆ ರೂ.15ನ್ನು ಮಾತ್ರನ್ನು ಜಮಾ ಮಾಡಲಾಗುತ್ತದೆ.

- ಈ ಕೆಳಗಿನ ಎಸಿಸಿಗಳು ಕ್ಯಾಶ್‌ಬ್ಯಾಕ್ ಅರ್ಹತೆಯಿಂದ ಹೊರಗುಳಿಯುತ್ತವೆ( ಇಂಧನ ಮತ್ತು ವಾಲೆಟ್ ಲೋಡ್ ಮತ್ತು ಆಭರಣ, ಬಾಡಿಗೆ ಪಾವತಿ ವಹಿವಾಟುಗಳು): 6012, 6051, 5541, 5983, 5542, 5944, 6011, 6540, 6513.

- ದಾಖಲೆಗಳಲ್ಲಿ ನೀಡಲಾಗಿರುವ ನಿಬಂಧನೆಗಳು ಮತ್ತು ಷರತ್ತುಗಳು 30 ದಿನಗಳ ಪೂರ್ವ ಸೂಚನೆಯೊಂದಿಗೆ ಯಾವುದೇ ಸಮಯದಲ್ಲಿ ಪರಿಷ್ಕೃತಗೊಳ್ಳಬಹುದು ಅಥವಾ ಮುಕ್ತಾಯಗೊಳ್ಳಬಹುದು.

- ಒಂದು ವೇಳೆ ಕಾರ್ಡ್ ಹಿಂಪಡೆದಲ್ಲಿ ಅಥವಾ ರದ್ದುಗೊಂಡಲ್ಲಿ ಅಥವಾ ರದ್ದುಗೊಳ್ಳಲು ಕಾರಣವಾದಲ್ಲಿ ಅಥವಾ ಕಾರ್ಡ್ ಸದಸ್ಯರ ಖಾತೆಯು ವಂಚನೆಯ ಖಾತೆಯಾಗಿದ್ದಲ್ಲಿ ಕ್ಯಾಶ್‌ಬ್ಯಾಕ್ ಅನ್ವಯವಾಗುವುದಿಲ್ಲ.

- ಎಕ್ಸಿಸ್ ಬ್ಯಾಂಕ್‌ನ ಕ್ಯಾಶ್‌ಬ್ಯಾಕ್‌ನ ಎಣಿಕೆಯು ಅಂತಿಮವಾಗಿರುತ್ತದೆ , ನಿರ್ಣಾಯಕವಾಗಿರುತ್ತದೆ ಮತ್ತು ಕಾರ್ಡ್ ಸದಸ್ಯರು ಪಾಲಿಸಲೇಬೇಕಾಗಿರುತ್ತದೆ ಮತ್ತು ವಿವಾದಕ್ಕೆ ಅಥವಾ ಪ್ರಶ್ನಾವಳಿಗೆ ಹೊಣೆಗಾರರಾಗಿರುವುದಿಲ್ಲ,

- ಈ ದಾಖಲೆಯು ಒಳಗೊಂಡಿರುವ ನಿಬಂಧನೆಗಳು ದಾಖಲೆಯ ಅತೀ ಪ್ರಮುಖ ನಿಬಂಧನೆಗಳು ಮತ್ತು ಷರತ್ತುಗಳಿಗೆ ಹೆಚ್ಚುವರಿಯಾಗಿ ಮತ್ತು ಅವಹೇಳನಕಾರಿಯಾಗಿ ಇರಬಾರದು.

- ಕ್ಯಾಶ್‌ಬ್ಯಾಕ್ ಯೋಜನೆಯು ಎಕ್ಸಿಸ್ ಬ್ಯಾಂಕ್‌ನ ಅಪೇಕ್ಷೆಯ ಮೇರೆಗೆ ಲಭ್ಯವಿರುತ್ತದೆ ಮತ್ತು ಎಕ್ಸಿಸ್ ಬ್ಯಾಂಕ್ ಈ ಎಲ್ಲಾ ಅಥವಾ ಯಾವುದೇ ನಿಬಂಧನೆಗಳು ಮತ್ತು ಷರತ್ತುಗಳನ್ನು ಸೇರಿಸುವ ಮತ್ತು/ಅಥವಾ ಬದಲಾಯಿಸುವ, ಪರಿಷ್ಕರಿಸುವ ಅಥವಾ ಮಾರ್ಪಾಡು ಮಾಡುವ ಅಥವಾ ಇನ್ನೊಂದು ಯೋಜನೆಯಿಂದ ಕ್ಯಾಶ್‌ಬ್ಯಾಕ್ ಯೋಜನೆಯನ್ನು ಪೂರ್ಣವಾಗಿ ಅಥವಾ ಭಾಗಶಃ ಬದಲಾಯಿಸುವ ಅಥವಾ ಎಲ್ಲಾ ಒಟ್ಟಾಗಿ ಹಿಂದಕ್ಕೆ ಪಡೆಯುವ ಹಕ್ಕುಗಳನ್ನು ಸ್ಪಷ್ಟವಾಗಿ ಕಾಯ್ದಿರಿಸುತ್ತದೆ.

- ನಿಬಂಧನೆಗಳು ಮತ್ತು ಷರತ್ತುಗಳಲ್ಲಿರುವ ಒಳಗೊಂಡಿರುವ ಯಾವುದಕ್ಕೂ ಪೂರ್ವಾಗ್ರಹವಿಲ್ಲದೆ, ರಿವಾರ್ಡ್ ಯೋಜನೆ ಅಥವಾ ಅದಕ್ಕೆ ಸಂಬಂಧಿಸಿದ ಯಾವುದರ ಪರಿಣಾಮದಿಂದ ಅಥವಾ ಅದಕ್ಕೆ ಸಂಬಂಧಿಸಿ ಉಂಟಾಗುವ ಎಲ್ಲಾ ವಿವಾದಗಳು ಮುಂಬೈನಲ್ಲಿರುವ ಸಮರ್ಥ ನ್ಯಾಯಾಲಯಗಳು/ನ್ಯಾಯಮಂಡಳಿಗಳ ವಿಶೇಷ ನ್ಯಾಯವ್ಯಾಪ್ತಿಗೆ ಒಳಪಟ್ಟಿರುತ್ತವೆ.